(ಗೊಂದಲ)

ಡಾ॥ ಜೀವರಾಜ ಆಳ್ವ ಅವರ ದುಬೈಯ ಭೇಟಿ ಬಗ್ಗೆ ಪ್ರಸ್ತಾಪ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ದುಬೈಗೆ ಡಾ॥ ಜೀವರಾಜ ಆಳ್ವ ಅವರ ಹಠಾತ್ ಭೇಟಿ, ಸೂಟ್‌ಕೇಸ್ ರಹಸ್ಯ, ಕೇಂದ್ರ ತನಿಖೆ, ಇದು ಎಲ್ಲಾ ಪತ್ರಿಕೆಯಲ್ಲಿ ಬಂದಿದೆ. ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ ಹೋಗಿದ್ದಾರೆ ಎಂಬುದೆಲ್ಲಾ ಇದೆ.

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ಅವರು ಈ ಮನೆಯ ಗೌರವಾನ್ವಿತ ಸದಸ್ಯರಿದ್ದಾರೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೆ, ಇದು ಸ್ವಂತ ವ್ಯವಹಾರದ ಪ್ರಶ್ನೆ ಅಲ್ಲ. ಹೊರದೇಶಕ್ಕೆ ಹೋಗಲಿಕ್ಕೆ ಅನುಮತಿಯನ್ನು ಕೇಂದ್ರದವರು ಕೊಟ್ಟಿದ್ದಾರೆಯೇ ? ಏಕೆಂದರೆ ಸೂಟ್‌ಕೇಸ್ ಒಯ್ಯುವ ವಿಚಾರ ಎಲ್ಲಾ ಪ್ರಸ್ತಾಪ ಇರುವುದರಿಂದ ಹೊರದೇಶಕ್ಕೆ ಹೋಗಲಿಕ್ಕೆ ಅವರಿಗೆ ಅನುಮತಿ ಕೊಟ್ಟಿದ್ದಾರೆಯೇ ?

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಈಗ ವರದಿಯನ್ನು ಸಭೆಗೆ ಒಪ್ಪಿಸುವುದು.

ವರದಿಯನ್ನು ಒಪ್ಪಿಸುವುದು

ಶ್ರೀ ಬಿ. ಆರ್. ಯಾವಗಲ್ (ಉಪಾಧ್ಯಕ್ಷರು).—ಅಧ್ಯಕ್ಷರೆ, ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಹತ್ತನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಸಭೆಗೆ ಒಪ್ಪಿಸಲಾಗಿದೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್. ಅಧ್ಯಕ್ಷರೆ, ಪ್ರಶ್ನೋತ್ತರ ವೇಳೆ ಆದಮೇಲೆ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದುಕೊಳ್ಳೋಣ ಎಂದು ಹೇಳಿದ್ದಿರಿ.

(ಗೊಂದಲ)

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ, ನಾನು ನೋಟೀಸ್ ಕಳುಹಿಸಿದ್ದರ ಬಗ್ಗೆ ತಾವು ಏನೂ ಹೇಳಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಲಕ್ಕಪ್ಪನವರೇ, ತಾವು ಬಹಳ ಬುದ್ಧಿವಂತ ಪಕ್ಷಿಲರಿದ್ದೀರಿ, ನನಗೆ ಗೊತ್ತಿದೆ, ದಯವಮಾಡಿ ತಾವು ಕುಳಿತುಕೊಳ್ಳಬೇಕು. ಡಾ॥ ಜೀವರಾಜ ಆಳ್ವರವರು ಒಂದು ಪತ್ರ ಬರೆದಿದ್ದಾರೆ. ಅದು ಈ ರೀತಿ ಇದೆ. " Leave of Absence–I may be permitted to be absent from the meetings of the House for about a week's time from today. (This letter was receive on 19th) since I will be out of station." ಇಷ್ಟು ಬರೆದು ಕಳುಹಿಸಿದ್ದಾರೆ. ನೀವು ಅವರ ಬಗ್ಗೆ ನಿಯಮ ೩೫೭ರ ಪ್ರಕಾರ ನೋಟೀಸ್ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಎಂ. ರಘುಪತಿ.—ಅಧ್ಯಕ್ಷರೆ, ಈಗ ನನ್ನದೊಂದು ಕ್ರಿಯಾಲೋಪ ಇದೆ.

(ಗೊಂದಲ)

ಅಧ್ಯಕ್ಷರು.—ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು. ಅವರು ಈ ಸದನದ ಸದಸ್ಯರು. ಈಗ ಅವರು ಈ ಸದನದಲ್ಲಿ ಇಲ್ಲ. ಅವರು ಈ ಬಗ್ಗೆ ಎಕ್ಸ್‌ಪ್ಲನೇಷನ್ ಕೊಡಬೇಕು. ಆದ್ದರಿಂದ ದಯವಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)